# ಇಂದು ನಿನ್ನೆಯದಲ್ಲ...

ಭಾರತ ಉಪ ಖಂಡದಲ್ಲೇ ಜನಪ್ರಿಯವಾಗಿರುವ ಅನಾರ್ಕಲಿ ಸಾಂಪ್ರದಾಯಿಕ ದಿರಿಸಾಗಿ ಗುರುತಿಸಿಕೊಂಡಿದೆ. ಇದರ ಇತಿಹಾಸ ಇಂದು, ನಿನ್ನೆಯಲ್ಲ. 16ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ ಮೊಘಲ್ ಸಾಮ್ರಾಜ್ಯದಲ್ಲಿದ್ದ ಅನಾರ್ಕಲಿ ಎಂಬ ನೃತ್ಯಗಾರ್ತಿಯಿಂದ ಈ ಹೆಸರು ಬಂದಿದೆ ಎನ್ನುತ್ತವೆ ಇತಿಹಾಸದ ಪುಟಗಳು. ಅನಾರ್ಕಲಿ ಆಕರ್ಷಕ ಉಡುಪು ತೊಟ್ಟು ನೃತ್ಯ ಪ್ರದರ್ಶಿಸುತ್ತಿದ್ದಳು. ಆ ಉಡುಪು ರಾಣಿಯರನ್ನೂ ಬಹುವಾಗಿ ಆಕರ್ಷಿಸಿತು. ಸೌಂದರ್ಯ ಹಾಗೂ ಅದ್ದೂರಿತನವನ್ನು ಇಮ್ಮಡಿಗೊಳಿಸುತ್ತಿದ್ದ ಉಡುಪು ಅಂದು ಬಹು ಜನಪ್ರಿಯತೆ ಪಡೆದುಕೊಂಡಿತು. ಬಳಿಕ ನೃತ್ಯಗಾರ್ತಿಯ ಹೆಸರೇ ಆ ಉಡುಪಿಗೂ ಅಂಟಿಕೊಂಡಿತು ಎನ್ನುತ್ತದೆ ಇತಿಹಾಸ.

ಅನಾರ್ಕಲಿ ಎಂದರೆ 'ದಾಳಿಂಬೆ ಹೂವು' ಎಂದರ್ಥ. ಇದು ಪ್ರಕಾಶಮಾನವಾದ ಕಿತ್ತಲೆ–ಗಾಢ ಕೆಂಪು ಬಣ್ಣ ಹೊಂದಿರುವಂತೆಯೇ ಅನಾರ್ಕಲಿ ಉಡುಗೆಗಳೂ ಗಾಢ ಬಣ್ಣ ಹಾಗೂ ಅಲಂಕಾರಿಕ ವಿನ್ಯಾಸದ ಸಿಗ್ನೇಚರ್ ಆಗಿ ಗುರುತಿಸಿಕೊಂಡಿವೆ. ಹೀಗಾಗಿ ಅನಾರ್ಕಲಿ ಎಂಬ ಹೆಸರೂ ಅಂಟಿಕೊಂಡಿರಬಹುದು.

ಹಿಂದೆ ಕಥಕ್ ನೃತ್ಯಕ್ಕೆ ಮಾತ್ರವೇ ಸೀಮಿತವಾಗಿದ್ದ ದಿರಿಸು ಈಗ ಅನಾರ್ಕಲಿಯ ರೂಪ ಪಡೆದು ಎಲ್ಲೆಲ್ಲೂ ಜನಪ್ರಿಯವಾಗಿದೆ. ತುಂಬು ನೆರಿಗೆಗಳುಳ್ಳ ಕುರ್ತಿ, ಲೆಗ್ಗಿನ್ ಮಾದರಿಯ ಪ್ಯಾಂಟ್, ಕಾಂಟ್ರಾಸ್ಟ್ ಬಣ್ಣದ ದುಪ್ಪಟ್ಟ ಧರಿಸಿ, ಕಾಲಿಗೆ ಗೆಜ್ಜೆ ಕಟ್ಟಿ ವೇದಿಕೆ ಮೇಲೆ ಬಂದರೆ ಅದೇನೋ ರಂಗು. ನೃತ್ಯಗಾರ್ತಿ ತಿರುಗುತ್ತಿದ್ದಂತೆ ತನ್ನ ಮೈಯನ್ನೂ ಅಗಲವಾಗಿ ಚಾಚಿಕೊಳ್ಳುತ್ತಿದ್ದ ಕುರ್ತ ನೃತ್ಯಕ್ಕೆ, ನೃತ್ಯಗಾರ್ತಿಗೆ ಮೆರುಗು ನೀಡುತ್ತದೆ. ಈ ಉಡುಪೇ ಈಗ ಅನಾರ್ಕಲಿಯಾಗಿ ಟ್ರೆಂಡ್ ಆಗಿದೆ.

ಅದೇನೆ ಇರಲಿ, ಅನಾರ್ಕಲಿ ಒಂದು ಅತ್ಯುತ್ತಮ ಉಡುಗೆ. ತೊಡಲು ಸುಲಭ. ಮದುವೆ ಸಮಾರಂಭಕ್ಕೆ ಕಡುಗುಲಾಬಿ, ಕಿತ್ತಳೆ, ಕೆಂಪು, ಮೆರೂನು ಹಾಗೂ ಗಾಢ ನೀಲಿ ಬಣ್ಣಗಳ ಉಡುಪು ಅದ್ದೂರಿತನ ತಂದುಕೊಡುತ್ತವೆ. ಗೋಲ್ಡನ್ ವರ್ಕ್‌ಗಳಿಂದ ಶ್ರೀಮಂತ ನೋಟ ಲಭಿಸುತ್ತದೆ.

ಗಾಢಬಣ್ಣದ ಅನಾರ್ಕಲಿಗಳು ಹಬ್ಬದ ಕಳೆಯನ್ನು ಹೆಚ್ಚಿಸುತ್ತವೆ. ಹಾಗಾಗಿ ಸಾಂಪ್ರದಾಯಿಕ ಬಣ್ಣಗಳಾದ ಕೆಂಪು, ಪಿಂಕ್ ನೇರಳೆ ಬಣ್ಣದ ಅನಾರ್ಕಲಿಗಳ ಮೇಲೆ ಮೂಡುವ ಬೆಳ್ಳಿ ರೇಖೆಗಳ ಚಿತ್ತಾರಗಳು ಸೌಂದರ್ಯವನ್ನು ಇಮ್ಮಡಿಗೊಳಿಸುವುದರಲ್ಲಿ ಸಂದೇಹವಿಲ್ಲ. ಭಿನ್ನ ಲುಕ್‌ನೊಂದಿಗೆ ವಿಶೇಷ ವಿನ್ಯಾಸವನ್ನೂ ಹೊಂದಿರುವ ಅನಾರ್ಕಲಿ ಉಡುಪುಗಳಿಗೆ ಈಗ ಬೇಡಿಕೆ ಕುದುರುತ್ತಿದೆ. ಫ್ಯಾಷನ್ ಜಗತ್ತಿನಲ್ಲಿ ಬಗೆಬಗೆ ಟ್ರೆಂಡ್ ಸೆಟ್ ಮಾಡುತ್ತಿರುವ ವಿನ್ಯಾಸಕರೂ ಹೊಸತನದ ದಿರಿಸುಗಳನ್ನು ಫ್ಯಾಷನ್‌ಪ್ರಿಯರಿಗಾಗಿ ನಾಜೂಕಾಗಿ ತಯಾರಿಸುತ್ತಿದ್ದಾರೆ.



ಕೊಡುವ ಅನಾರ್ಕಲಿ ಈಗ ಮದುಮಗಳ ಆಯ್ಕೆಯೂ ಆಗುತ್ತಿದೆ.

ಚಿಕ್ಕ ಮಕ್ಕಳಿದ್ದರೆ ಸೀರೆ ಉಟ್ಟುಕೊಂಡು ಕಾರ್ಯಕ್ರಮದಲ್ಲಿ ಭಾಗಿಯಾಗುವುದು ಆಧುನಿಕ ಅಮ್ಮಂದಿರಿಗೆ ಸಾಹಸದ ಕೆಲಸವೇ. ಆಗಲೂ ಅವರ ನೆರವಿಗೆ ಬರುವುದು ಅನಾರ್ಕಲಿ. ಅದ್ದೂರಿ ವಿನ್ಯಾಸದ ಟಾಪ್, ಸಿಂಪಲ್ ದುಪಟ್ಟಾ ಧರಿಸಿದರೆ ಕಾರ್ಯಕ್ರಮದಲ್ಲಿ ಟ್ರೆಂಡಿ ಹಾಗೂ ಸಾಂಪ್ರದಾಯಿಕ ಲುಕ್ ಕೊಡುತ್ತದೆ. ಸೀರೆ ಉಟ್ಟುಕೊಂಡಿಲ್ಲ ಎನ್ನುವ ಕೊರಗನ್ನೂ ನೀಗಿಸುತ್ತದೆ. ಇನ್ನು ಗರ್ಭಿಣಿಯರಿಗೂ ಅನಾರ್ಕಲಿ ಹೇಳಿ ಮಾಡಿಸಿದಂತಿದೆ. ಎದೆ ಮಟ್ಟದಿಂದ ಕೆಳಗೆ ನೆರಿಗೆಗಳುಳ್ಳ ಅನಾರ್ಕಲಿ ತೊಟ್ಟರೆ ಗರ್ಭಿಣಿಯರಿಗೆ ಹೆಚ್ಚು ಕಂಫರ್ಟ್ ಆಗಿರುತ್ತದೆ. ಮುಂದೆ ಬಂದಿರುವ ಹೊಟ್ಟೆಯನ್ನು ಮರೆಮಾಚಲೂ ಅನಾರ್ಕಲಿ ನೆರವಿಗೆ ಬರುತ್ತದೆ.

ಸಿಲ್ಕ್, ಕಾಟನ್, ಜಾರ್ಜೆಟ್, ಶಿಫಾನ್, ವೆಲ್‌ವೆಟ್, ಕ್ರೇಪ್, ನೆಟ್, ಬ್ರಾಸ್ಸೊ, ಚಂದೇರಿ ಹೀಗೆ ವಿವಿಧ ಬಗೆಯ ಬಟ್ಟೆಗಳಲ್ಲಿ ಅನಾರ್ಕಲಿ ಉಡುಪನ್ನು ಸಿದ್ಧಗೊಳಿಸಲಾಗುತ್ತದೆ. ಅರ್ಧ ಮಾತ್ರ ಹೊಲಿದ, ಪೂರ್ತಿ ಹೊಲಿದ ಅಥವಾ ಮೆಟೀರಿಯಲ್ ರೀತಿಯೂ ಲಭ್ಯ. ಅರ್ಧ ಮಾತ್ರ ಹೊಲಿದ ಅನಾರ್ಕಲಿ ಕೊಂಡರೆ ದೇಹದ ಅಳತೆಗೆ ತಕ್ಕಂತೆ ಹೊಲಿಸಿಕೊಳ್ಳಬಹುದು. ಮೆಟೀರಿಯಲ್ ಕೊಂಡರೆ ನಮಗೆ ಬೇಕಾದ ಡಿಸೈನ್ ಬೇಕಾದ ಕಡೆ ಬರುವಂತೆ ಹೊಲಿಸಿಕೊಳ್ಳಬಹುದು. ಇನ್ನು ಪೂರ್ತಿ ಸಿದ್ಧಗೊಂಡ ಉಡುಗೆ ಕೊಂಡರೆ ಮತ್ತೆ ಟೈಲರ್ ಶಾಪ್‌ಗೆ ಎಡತಾಕುವ ಪ್ರಮೇಯ ಇರುವುದಿಲ್ಲ.

## ಭಿನ್ನ ಶೈಲಿ; ಆಯ್ಕೆ ವೈವಿಧ್ಯ

ಫ್ಲೋರ್‌ಲೆಂತ್ ಅನಾರ್ಕಲಿ, ಆ್ಯಂಕಲ್ ಲೆಂತ್, ಕೇಪ್ ಸ್ಟೈಲ್, ಜಾಕೆಟ್ ಶೈಲಿ, ಪದರಗಳುಳ್ಳ, ಗೌನ್ ಶೈಲಿಯ, ಪಲಾಜೊ, ಚೂಡಿದಾರ್ ಅನಾರ್ಕಲಿ, ಕಾಟನ್, ಸಿಲ್ಕ್ ಅನಾರ್ಕಲಿ, ಬ್ರೈಡಲ್ ಅನಾರ್ಕಲಿ, ಪಾರ್ಟಿ ವೇರ್, ಟ್ರೆಡಿಶನಲ್, ಡಿಸೈನರ್ ಅನಾರ್ಕಲಿ, ಸಿಂಪಲ್ ಅನಾರ್ಕಲಿ, ಪಾಕಿಸ್ತಾನಿ ಅನಾರ್ಕಲಿ ಹೀಗೆ ಹಲವು ಆಯ್ಕೆಗಳಿವೆ. ಪಿಯರ್ ಶೇಪ್, ರೆಟ್‌ಆ್ಯಂಗಲ್, ಹಗ್‌ಲಸ್, ಆ್ಯಪಲ್ ಶೇಪ್‌ಗಳೂ ಲಲನೆಯರ ಆಕರ್ಷಣೆಗೊಳಗಾಗಿವೆ.

ಫ್ಲೋರ್‌ಲೆಂತ್ ಅನಾರ್ಕಲಿಗೆ ಪ್ಯಾಂಟ್ ಬಳಸುವ ಅಗತ್ಯವಿರುವುದಿಲ್ಲ. ಇದು ಅನಾರ್ಕಲಿಗಳಲ್ಲೇ ರಾಣಿಯಂತೆ ಮೆರೆಯುತ್ತಿದೆ. ಸೆಲೆಬ್ರಿಟಿಗಳ ಇಷ್ಟದ ದಿರಿಸೂ ಹೌದು. ಟಾಪ್ ಅದ್ದೂರಿತನದಿಂದ ಕೂಡಿದ್ದರೆ ದುಪಟ್ಟಾ ಸಿಂಪಲ್ ಆಗಿ ಡಿಸೈನ್ ಆಗಿರುತ್ತದೆ. ಟಾಪ್ ಸಿಂಪಲ್ ಆಗಿದ್ದರೆ ದುಪಟ್ಟಾ ಅದ್ದೂರಿಯಾಗಿರುತ್ತದೆ. ಇನ್ನು ಕಾಂಟ್ರಾಸ್ಟ್ ಕಲರ್ ಇಷ್ಟ ಪಡುವವರಿಗೂ ಅನಾರ್ಕಲಿ ನಿರಾಸೆ ಮೂಡಿಸದು. ಪಲಾಜೊ ಪ್ಯಾಂಟ್‌ಗೆ ಅನಾರ್ಕಲಿ ಕುರ್ತಿ ಧರಿಸುವುದು ಈಗಿನ ಟ್ರೆಂಡ್.

ಆ್ಯಂಕಲ್ ಲೆಂತ್ ಅನಾರ್ಕಲಿ ಕಾಲೇಜು ಹುಡುಗಿಯರ ಇಷ್ಟದ ದಿರಿಸಾಗುತ್ತಿದೆ. ಹೆಚ್ಚು ಅದ್ದೂರಿಯಾಗಿರದ, ನಿತ್ಯವೂ ಬಳಸಬಹುದಾದ, ಕಡಿಮೆ ಬೆಲೆಗೂ ಲಭ್ಯವಾಗುವ ಈ ಉಡುಗೆ ಯುವತಿಯರ ಫೇವರೆಟ್. ಲೆಹೆಂಗಾ ಮಾದರಿಯ ಅನಾರ್ಕಲಿಯೂ ಹೆಚ್ಚು ಆಕರ್ಷಣೀಯ. ಭುಜದಿಂದ ಎದೆಮಟ್ಟದವರೆಗೆ ಒಂದು ಬಣ್ಣ, ಎದೆಮಟ್ಟದಿಂದ ತಳಭಾಗದವರೆಗೆ ಕಾಂಟ್ರಾಸ್ಟ್ ಬಣ್ಣದಿಂದ ವಿನ್ಯಾಸಗೊಂಡ ಅನಾರ್ಕಲಿಯ ಸೊಗಸೇ ಭಿನ್ನ. ಬಾರ್ಡರ್ ಅನಾರ್ಕಲಿ, ಫುಲ್ ನೆಕ್, ಫುಲ್ ಸ್ಲೀವ್, ಸ್ಲೀವ್ ಲೆಸ್ ಹೀಗೆ ನಮಗಿಷ್ಟದ ಶೈಲಿಯ ಅನಾರ್ಕಲಿ ತೊಟ್ಟು ಖುಷಿ ಪಡಬಹುದು. ಅಷ್ಟು ಆಯ್ಕೆ ವೈವಿಧ್ಯ ಇದರಲ್ಲಿವೆ. ರೇಷ್ಮೆ, ಸಾಫ್ಟ್ ಸಿಲ್ಕ್ ಸೀರೆ, ಕಾಟನ್ ಸೀರೆಗಳನ್ನು ಉಟ್ಟು ಬೇಸರವೆನಿಸಿದರೆ ಅದರಲ್ಲೂ ಅನಾರ್ಕಲಿ ಹೊಲಿಸಿಕೊಳ್ಳಬಹುದು. ■